# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 345 |
| ಸದಸ್ಯರ ಹೆಸರು | : | ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 07-07-2023 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಅಂಗನವಾಡಿಗಳಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಮೊಟ್ಟೆಗಳನ್ನು ಯಾವ ಯೋಜನೆಗಳ ಮೂಲಕ ವಿತರಣೆ ಮಾಡಲಾಗುತ್ತದೆ; ಸರ್ಕಾರದ ಪರವಾಗಿ ಯಾರು ಟೆಂಡರ್ ಕರೆಯುತ್ತಾರೆ; (ವಿವರ ನೀಡುವುದು) | ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ಮಾತೃಪೂರ್ಣ ಯೋಜನೆಯಡಿ ಮತ್ತು ಮಕ್ಕಳಿಗೆ ಸೃಷ್ಟಿ ಯೋಜನೆಯಡಿ ಮೊಟ್ಟೆಗಳನ್ನು ವಿತರಣೆ ಮಾಡಲಾಗುತ್ತದೆ.<br><br>ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ವಿತರಿಸಲಾಗುವ ಕೋಳಿ ಮೊಟ್ಟೆಗಳನ್ನು ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಕರೆದು ಖರೀದಿಸಲಾಗುತ್ತಿದ್ದು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಟೆಂಡರ್ ಕರೆಯುತ್ತಾರೆ. |
| ಆ. | 2022-23ನೇ ಆರ್ಥಿಕ ವರ್ಷಕ್ಕೆ ಈ ಯೋಜನೆಯಡಿ ರಾಜ್ಯದ ಎಷ್ಟು ಜಿಲ್ಲೆಗಳು ಟೆಂಡರ್ ಕರೆದಿವೆ; ಎಷ್ಟು ಜಿಲ್ಲೆಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿದೆ; ಕೆಲವು ಜಿಲ್ಲೆಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಕಾರಣಗಳೇನು; | ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ವಿತರಿಸಲಾಗುವ ಕೋಳಿ ಮೊಟ್ಟೆಗಳನ್ನು ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಕರೆದು ಖರೀದಿಸಲಾಗುತ್ತಿದ್ದು, 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವ ಮತ್ತು ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದೇ ಬಾಕಿ ಇರುವ ಜಿಲ್ಲೆಗಳಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಮೊಟ್ಟೆ ವಿತರಿಸುತ್ತಿರುವ ವಿಧಾನಗಳ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ. | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿರುವ ಜಿಲ್ಲೆಗಳಲ್ಲಿ ಯಾವ ವಿಧಾನದ ಮೂಲಕ ಅಂಗನವಾಡಿಗಳಿಗೆ ಮೊಟ್ಟೆ ವಿತರಿಸಲಾಗುತ್ತಿದೆ? (ಮಾಹಿತಿ ನೀಡುವುದು) | |

**ಸಂಖ್ಯೆ: ಮಮಇ 117 ಐಸಿಡಿ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು

| ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಟಿ.ಎ. ಶರವಣ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 345 ಕ್ಕೆ ಒದಗಿಸಲಾದ ಅನುಬಂಧ | | | | | | |
|---|---|---|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | 2022-23ನೇ ಸಾಲಿನಲ್ಲಿ ಟೆಂಡರ್ ಕರೆದಿರುವ ತಾಲ್ಲೂಕುಗಳ ಸಂಖ್ಯೆ | 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಸ್ಪಷ್ಟ ಕಾರಣ ನಮೂದಿಸುವುದು | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಯಾವ ವಿಧಾನದ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
| 1 | 2 | 3 | 4 | 5 | 6 | 7 |
| 1 | ಬಾಗಲಕೋಟೆ | 6 | 0 | 6 | ಟೆಂಡರ್ ನ ತಾಂತ್ರಿಕ ಬಿಡ್ಡನ್ನು ತೆರೆಯಲಾಗಿದ್ದು, ಆರ್ಥಿಕ ಬಿಡ್ಡನ್ನು ತೆಗೆದು ಅಂತಿಮಗೊಳಿಸುವ ಹಂತದಲ್ಲಿದೆ. | ಹಿಂದಿನ ಪದ್ಧತಿಯಂತೆ ಬಾಲವಿಕಾಸ ಸಮಿತಿ ಜಂಟಿ ಖಾತೆಗೆ ಹಣವನ್ನು ಜಮೆ ಮಾಡಿ ಖರೀದಿಸಿ ವಿತರಿಸಲಾಗುತ್ತಿದೆ. |
| 2 | ಬೆಂಗಳೂರು(ಗ್ರಾ.) | 4 | 4 | 0 | - | ಹೊಸಕೋಟೆ ತಾಲ್ಲೂಕಿನಲ್ಲಿ ಮೊಟ್ಟೆ ಸರಬರಾಜಾಗುತ್ತಿದೆ. ದೇವನಹಳ್ಳಿ, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ ಮೊಟ್ಟೆ ಸರಬರಾಜು ಮಾಡಲು ಆದೇಶ ನೀಡಲಾಗಿದ್ದು, ಜುಲೈ -2023 ಮಾಹೆಯಿಂದ ಸರಬರಾಜು ಮಾಡಲಾಗುವುದು. ಜೂನ್ -2023 ಮಾಹೆಯವರೆಗೆ ಬಾಲವಿಕಾಸ ಸಮಿತಿ ಖಾತೆಗೆ ಜಮಾ ಮಾಡಲಾಗಿದೆ |
| 3 | ಬೆಂಗಳೂರು ನಗರ | 6 | 0 | 6 | ಬೆಂಗಳೂರು ಕೇಂದ್ರ ಯೋಜನೆಯಲ್ಲಿ ಮರು ಟೆಂಡರ್ ಕರೆದಿದ್ದು, ನೀತಿ ಸಂಹಿತಿ ಜಾರಿಯಲ್ಲಿದ್ದುದರಿಂದ ಟೆಂಡರ್ ತೆರೆಯಲು ಸಾಧ್ಯವಾಗಿರಲಿಲ್ಲ. ಶಿ.ಅ.ಯೋಜನಾಧಿಕಾರಿಗಳು ವರ್ಗಾವಣೆಗೊಂಡು ಬಂದಿರುವುದರಿಂದ ಅವರ ಕೀ ಮ್ಯಾಪಿಂಗ್ ಆದ ನಂತರ ಟೆಂಡರ್ ತೆರೆಯಲಾಗುವುದು, ಉಳಿದ 5 ಯೋಜನೆಗಳಲ್ಲಿ ಮರು ಟೆಂಡರ್ ಕರೆಯಬೇಕಾಗಿದೆ. | ಅಂಗನವಾಡಿ ಕೇಂದ್ರಗಳ ಬಿ.ವಿ.ಎಸ್.ಜಂಟಿ ಖಾತೆಗೆ ಹಣ ಜಮೆ ಮಾಡಲಾಗುತ್ತಿದ್ದು, ಸ್ಥಳೀಯವಾಗಿ ಮೊಟ್ಟೆ ಖರೀದಿ ಮಾಡಿ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. |

| ಕ್ರ. ಸಂ. | ಜಿಲ್ಲೆಯ ಹೆಸರು | 2022-23ನೇ ಸಾಲಿನಲ್ಲಿ ಟೆಂಡರ್ ಕರೆದಿರುವ ತಾಲ್ಲೂಕುಗಳ ಸಂಖ್ಯೆ | 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಸ್ಪಷ್ಟ ಕಾರಣ ನಮೂದಿಸುವುದು | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಯಾವ ವಿಧಾನದ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
|---|---|---|---|---|---|---|
| 4 | ಬಳ್ಳಾರಿ | 4 | 0 | 4 | ಜಿಲ್ಲೆಯಾದ್ಯಂತ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು ಕೊನೆಯ ದಿನಾಂಕ:26-08-2022 ರಂದು ನಿಗಧಿಪಡಿಸಿ ತಾಂತ್ರಿಕ ಬಿಡ್ ತೆರೆಯಲಾಗಿದ್ದು, ನಂತರ ಆರ್ಥಿಕ ಬಿಡ್ ತೆರೆದಿರುವುದಿಲ್ಲ, ಕಾರಣ ಕೆ.ಎಸ್.ಸಿ.ಸಿ.ಎಫ್ ಹೊಸಪೇಟೆ ಇವರು ಉಚ್ಚನ್ಯಾಯಲಯ ಧಾರವಾಡ ಪೀಠ ಇವರಿಂದ ತಡೆಯಾಜ್ಞೆ ಆದೇಶ ಹೊರಡಿಸಿರುತ್ತಾರೆ. | ಕೆ.ಎಸ್.ಸಿ.ಸಿ.ಎಫ್ ಸಂಸ್ಥೆ, ಹೊಸಪೇಟೆ ಇವರಿಂದ ಖರೀದಿಸಿ ವಿತರಿಸಲಾಗುತ್ತಿದೆ. |
| 5 | ವಿಜಯನಗರ | 5 | 5 | 0 | - | - |
| 6 | ಬೆಳಗಾವಿ | 14 | 0 | 14 | ಟೆಂಡರ್ ನ ತಾಂತ್ರಿಕ ಬಿಡ್ನನ್ನು ತೆರೆಯಲಾಗಿದ್ದು, ಆರ್ಥಿಕ ಬಿಡ್ನನ್ನು ತೆಗೆದು ಅಂತಿಮಗೊಳಿಸುವ ಹಂತದಲ್ಲಿದೆ. | ಹಿಂದಿನ ಪದ್ದತಿಯಂತೆ ಬಾಲವಿಕಾಸ ಸಮಿತಿ ಜಂಟಿ ಖಾತೆಗೆ ಹಣವನ್ನು ಜಮೆ ಮಾಡಿ ಖರೀದಿಸಿ ವಿತರಿಸಲಾಗುತ್ತಿದೆ. |
| 7 | ಬೀದರ್ | 5 | 0 | 5 | ಮಾನ್ಯ ಉಚ್ಚ ನ್ಯಾಯಾಲಯ ಕಲಬುರ್ಗಿಯಿಂದ ಟೆಂಡರ್ ಪ್ರಕ್ರೀಯೆಗಾಗಿ ತಡೆಯಾಜ್ಞೆ. | ಪ್ರಸ್ತುತ ಕೆ.ಸಿ.ಸಿ.ಎಫ್ ಸಂಸ್ಥೆ ಹೊಸಪೇಟೆ ಇವರಿಂದ ಖರೀದಿಸಿ ವಿತರಿಸಲಾಗುತ್ತಿದೆ. |
| 8 | ವಿಜಯಪುರ | 7 | 7 | 0 | - | - |
| 9 | ಚಾಮರಾಜನಗರ | 5 | 5 | 0 | - | - |
| 10 | ಚಿಕ್ಕಬಳ್ಳಾಪುರ | 6 | 6 | 0 | - | - |
| 11 | ಚಿಕ್ಕಮಗಳೂರು | 7 | 7 | 0 | 2022-23 ನೇ ಸಾಲಿನ ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಿ , 2023-24 ನೇ ಸಾಲಿಗೆ ಹೊಸದಾಗಿ ಟೆಂಡರ್ ಆಹ್ವಾನಿಸುವಂತೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶಿಸಿದ್ದು, ಕೇಂದ್ರ ಕಛೇರಿಗೆ 2023-24 ನೇ ಸಾಲಿಗೆ ಟೆಂಡರ್ ಆಹ್ವಾನಿಸುವ ಸಂಬಂಧ ಮಾರ್ಗದರ್ಶನ ಕೋರಿದೆ. | ಬಾಲವಿಕಾಸ ಸಮಿತಿ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
| 12 | ಚಿತ್ರದುರ್ಗ | 7 | 7 | 0 | - | - |
| 13 | ದಾವಣಗೆರೆ | 5 | 5 | 0 | - | - |

| ಕ್ರ. ಸಂ. | ಜಿಲ್ಲೆಯ ಹೆಸರು | 2022-23ನೇ ಸಾಲಿನಲ್ಲಿ ಟೆಂಡರ್ ಕರೆದಿರುವ ತಾಲ್ಲೂಕುಗಳ ಸಂಖ್ಯೆ | 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಸ್ಪಷ್ಟ ಕಾರಣ ನಮೂದಿಸುವುದು | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಯಾವ ವಿಧಾನದ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
|---|---|---|---|---|---|---|
| 14 | ದಕ್ಷಿಣ ಕನ್ನಡ | 7 | 7 | 0 | - | - |
| 15 | ಧಾರವಾಡ | 6 | 5 | 1 | ದಾಖಲಾತಿಗಳು ಸ್ಪಷ್ಟವಿಲ್ಲದಿರುವ ಕಾರಣ | ಹಿಂದಿನ ಪದ್ಧತಿಯಂತೆ ಬಾಲವಿಕಾಸ ಸಮಿತಿ ಜಂಟಿ ಖಾತೆಗೆ ಹಣವನ್ನು ಜಮ ಮಾಡಿ ಖರೀದಿಸಿ ವಿತರಿಸಲಾಗುತ್ತಿದೆ. |
| 16 | ಗದಗ್ | 5 | 5 | 0 | - | - |
| 17 | ಕಲ್ಬುರ್ಗಿ | 9 | 9 | 0 | - | - |
| 18 | ಹಾಸನ | 8 | 8 | 0 | - | - |
| 19 | ಹಾವೇರಿ | 7 | 7 | 0 | - | - |
| 20 | ಕೊಡಗು | 3 | 3 | 0 | - | - |
| 21 | ಕೋಲಾರ | 6 | 0 | 6 | ಕೋಲಾರ ಜಿಲ್ಲೆಯಲ್ಲಿ 2022-23 ನೇ ಸಾಲಿಗೆ 6 ತಾಲ್ಲೂಕುಗಳಲ್ಲಿ ಕೋಳಿ ಮೊಟ್ಟೆ ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಯಾವುದೇ ಸಂಸ್ಥೆಯು ಅರ್ಹರಾಗಿರುವುದಿಲ್ಲ, ಆದ ಕಾರಣ ಮತ್ತೊಮ್ಮೆ ಮರು ಟೆಂಡರ್ ಪ್ರಕಟಿಸಲಾಗಿ ತಾಂತ್ರಿಕ ಬಿಡ್ ತೆರೆದಿದ್ದು, ತಾಂತ್ರಿಕ ಬಿಡ್ ನಲ್ಲಿ ಅರ್ಹರಾದ ಸಂಸ್ಥೆಗಳ ಆರ್ಥಿಕ ಬಿಡ್ ತೆರೆಯುವ ಸಂದರ್ಭದಲ್ಲಿ ಕರ್ನಾಟಕ ವಿಧಾನ ಸಭೆ ಚುನಾವಣಾ ನೀತಿ ಸಂಹಿತೆ ಜಾರಿಗೊಂಡಿದ್ದರಿಂದ ಮರು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ತದನಂತರ 2022-23 ನೇ ಸಾಲಿನ ಆರ್ಥಿಕ ವರ್ಷ ಮುಗಿದ ಕಾರಣ ಅವಧಿ ಮುಗಿದಿರುತ್ತದೆ. 2023-24 ನೇ ಸಾಲಿಗೆ ಪ್ರಧಾನ ಕಛೇರಿಯ ಮಾರ್ಗಸೂಚಿಯನ್ನು ನಿರೀಕ್ಷಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ. | ಕೋಲಾರ ಜಿಲ್ಲೆಯಲ್ಲಿ ಕೋಳಿ ಮೊಟ್ಟೆ ಟೆಂಡರ್ ಪೂರ್ಣಗೊಳ್ಳದೇ ಇರುವುದರಿಂದ ಅಂಗನವಾಡಿ ಕೇಂದ್ರಗಳಿಗೆ ಬಾಲವಿಕಾಸ ಸಮಿತಿ ಮೂಲಕ ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ. |

| ಕ್ರ. ಸಂ. | ಜಿಲ್ಲೆಯ ಹೆಸರು | 2022-23ನೇ ಸಾಲಿನಲ್ಲಿ ಟೆಂಡರ್ ಕರೆದಿರುವ ತಾಲ್ಲೂಕುಗಳ ಸಂಖ್ಯೆ | 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಸ್ಪಷ್ಟ ಕಾರಣ ನಮೂದಿಸುವುದು | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಯಾವ ವಿಧಾನದ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
|---|---|---|---|---|---|---|
| 22 | ಕೊಪ್ಪಳ | 5 | 5 | 0 | - | - |
| 23 | ಮಂಡ್ಯ | 8 | 8 | 0 | - | - |
| 24 | ಮೈಸೂರು | 9 | 9 | 0 | ಮೈಸೂರು ನಗರ ಯೋಜನೆಯ ಟೆಂಡರ್ ನ ತಾಂತ್ರಿಕ ಬಿಡ್ನನ್ನು ತೆರೆಯಲಾಗಿದ್ದು, ಆರ್ಥಿಕ ಬಿಡ್ನನ್ನು ತೆಗೆದು ಅಂತಿಮಗೊಳಿಸುವ ಹಂತದಲ್ಲಿದೆ. | ಮೈಸೂರು ನಗರ ಯೋಜನೆಯಲ್ಲಿ ಮಾತ್ರ ಹಿಂದಿನ ಪದ್ಧತಿಯಂತೆ ಬಾಲವಿಕಾಸ ಸಮಿತಿ ಜಂಟಿ ಖಾತೆಗೆ ಹಣವನ್ನು ಜಮೆ ಮಾಡಿ ಖರೀದಿಸಿ ವಿತರಿಸಲಾಗುತ್ತಿದೆ. ಉಳಿದ 8 ಯೋಜನೆಗಳಲ್ಲಿ ಟೆಂಡರ್ ದಾರರಿಂದ ಸರಬರಾಜು ಮಾಡಿಸಲಾಗುತ್ತಿದೆ. |
| 25 | ರಾಮನಗರ | 5 | 5 | 0 | - | - |
| 26 | ರಾಯಚೂರು | 8 | 0 | 8 | ಈಗಾಗಲೇ ಕೋಳಿ ಮೊಟ್ಟೆ ಖರೀದಿಗಾಗಿ ಟೆಂಡರ್ ಕರೆಯಲಾಗಿದ್ದು, ಆದರೆ ಕಾರ್ಯಾದೇಶ ನೀಡದಂತೆ ಕೆ.ಸಿ.ಸಿ.ಎಫ್, ಹೊಸಪೇಟೆ ಸಂಸ್ಥೆ ಇವರು ದಾವೆ ಹೂಡಿದ್ದು, ಅದರಂತೆ ಮಾನ್ಯ ನ್ಯಾಯಾಲಯದಿಂದ ತಡೆಯಾಜ್ಞೆ ಹೊರಡಿಸಲಾಗಿರುತ್ತದೆ. | ಪ್ರಸ್ತುತ ಮಾನ್ಯ ಜಿಲ್ಲಾ ಆಹಾರ ಖರೀದಿ ಮೇಲ್ವಿಚಾರಣಾ ಸಮಿತಿ ರಾಯಚೂರು ವತಿಯಿಂದ ಹೊರಡಿಸಲಾದ ಆದೇಶದ ಮೇರೆಗೆ ಕೆ.ಸಿ.ಸಿ.ಎಫ್, ಹೊಸಪೇಟೆ ಸಂಸ್ಥೆವತಿಯಿಂದ ಕೇಂದ್ರಗಳಿಗೆ ಕೋಳಿ ಮೊಟ್ಟೆ ಖರೀದಿಸಿ ವಿತರಿಸಲಾಗುತ್ತಿದೆ. |
| 27 | ಶಿವಮೊಗ್ಗ | 7 | 0 | 7 | ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳ ತಾಂತ್ರಿಕ ಬಿಡ್ ಅಂಗೀಕರಿಸಿ ಆರ್ಥಿಕ ಬಿಡ್ ತೆರೆಯುವ ಅಂತಿಮ ಹಂತದಲ್ಲಿರುತ್ತದೆ ಮತ್ತು ತೀರ್ಥಹಳ್ಳಿ, ಸಾಗರ, ಸೊರಬ, ಶಿಕಾರಿಪುರ , ಹೊಸನಗರ ತಾಲ್ಲೂಕುಗಳಲ್ಲಿ ಹೊಸ ಇ - ಪ್ರೊಕ್ಯೂರ್ಮೆಂಟ್ ನಲ್ಲಿ ಮೂರನೇ ಮರು ಇ - ಟೆಂಡರ್ ಕರೆಯಲು ಅಗತ್ಯ ಕ್ರಮಕೈಗೊಳ್ಳಲಾಗಿದೆ | ಬಾಲವಿಕಾಸ ಸಮಿತಿ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
| 28 | ತುಮಕೂರು | 11 | 11 | 0 | - | - |
| 29 | ಉಡುಪಿ | 4 | 4 | 0 | - | - |

| ಕ್ರ. ಸಂ. | ಜಿಲ್ಲೆಯ ಹೆಸರು | 2022-23ನೇ ಸಾಲಿನಲ್ಲಿ ಟೆಂಡರ್ ಕರೆದಿರುವ ತಾಲ್ಲೂಕುಗಳ ಸಂಖ್ಯೆ | 2022-23ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರುವ ತಾಲ್ಲೂಕುಗಳ ಸಂಖ್ಯೆ | ಟೆಂಡರ್ ಪ್ರಕ್ರಿಯೆ ಮುಗಿಯದಿರಲು ಸ್ಪಷ್ಟ ಕಾರಣ ನಮೂದಿಸುವುದು | ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಯಾವ ವಿಧಾನದ ಮೂಲಕ ಮೊಟ್ಟೆ ವಿತರಿಸಲಾಗುತ್ತಿದೆ. |
|---|---|---|---|---|---|---|
| 30 | ಉತ್ತರಕನ್ನಡ | 11 | 9 | 2 | 2-3 ಸಲ ಟೆಂಡರ್ ಕರೆದಾಗ್ಯೂ ಸಹ ಯಾರೂ ಭಾಗವಹಿಸದೇ ಇರುವುದರಿಂದ ಟೆಂಡರ್ ಪ್ರಕಿಯೆ ಮುಗಿದಿರುವುದಿಲ್ಲ. | ಮೊದಲಿನಂತೆಯೇ ಬಾಲವಿಕಾಸ ಸಮಿತಿ ಜಂಟಿ ಖಾತೆಗೆ ಹಣ ಜಮೆ ಮಾಡುವುದರ ಮೂಲಕ ಮೊಟ್ಟೆಗಳನ್ನು ವಿತರಣೆ ಮಾಡಲಾಗುತಿದೆ. |
| 31 | ಯಾದಗಿರಿ | 4 | 0 | 4 | ಯಾದಗಿರಿ ಜಿಲ್ಲೆಯಲ್ಲಿ ಕೋಳಿ ಮೊಟ್ಟೆ ಟೆಂಡರ್ (Call-03) ಆಹ್ವಾನಿಸಿ ಆರ್ಥಿಕ ಬಿಡ್ ತೆರೆಯಲಾಗಿದ್ದು, ಕೆ.ಸಿ.ಸಿ.ಎಫ್, ಹೊಸಪೇಟೆ ಸಂಸ್ಥೆ ಇವರು ಸದರಿ ಟೆಂಡರ್ ಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ಕಲಬುರ್ಗಿಯಲ್ಲಿ ದಾವೆ ಹೂಡಿದ್ದು, ಅದರಂತೆ ಮಾನ್ಯ ನ್ಯಾಯಾಲಯದಿಂದ ಮುಂದಿನ ವಿಚಾರಣೆಯವರೆಗೆ ಅಂತಿಮ ಕಾರ್ಯಾದೇಶ ನೀಡದಿರಲು ತಡೆಯಾಜ್ಞೆ ಹೊರಡಿಸಲಾಗಿರುತ್ತದೆ. | ಕೆ.ಎಸ್.ಸಿ.ಸಿ.ಎಫ್. ಸಂಸ್ಥೆ, ಹೊಸಪೇಟೆ ಇವರಿಂದ ಖರೀದಿಸಿ ವಿತರಿಸಲಾಗುತ್ತಿದೆ. |
| | **ಒಟ್ಟು** | **204** | **141** | **63** | | |